**ಕಥೆ**



**ಸಂತೋಷ ಗುಡ್ಡಿಯಂಗಡಿ**

ಕಲೆ: ಮುರಳೀಧರ್ ರಾಥೋಡ್

# ಅನ್ನ ಬಂದ್ರೆ?



ಊರೂರ ಮಾರಿಹಬ್ಬಗಳು ಆರಂಭವಾಗೋ ಕಾಲಕ್ಕ ಸೊಪ್ಪುಸದೆ ಮೇಯ್ಕಂಡು ಮೈಕೈ ತುಂಬ್ಕಂಡು ಚೆನ್ನಾಗಿ ಬೆಳೆದಿದ್ರೂವಿ ತನ್ನ ನಾಕು ಕುರಿಮರಿಗಳ ಹೊಟ್ಟೆಪಾಡು ಅಂದ್ಕಂಡು ಅವ್ಗಳ ಅಟ್ಕಂಡು ನಾರಾಯ್ಣಿ ಹಟ್ಟಿಂದ ಈಚ್ಗ ಕಡ್ದನು. ಚೂರೂ ಪಾರು ಸೆತ್ತಗಳೆಲ್ಲಾವಿ ಸುಟ್ಟೋಗೋ ತರದ ಆ ಸುಡು ಬಿಸ್ಲಿಗ: 'ಬೆಂಕಿಗ ಬೆದರ್ನಿಲ್ಲ ಇನ್ನ ನೀನ್ಯಾವ ಸ್ಯಾಟ ತಗ' ಅಂದ್ಕಂಡು ಹಳಕಾವ್ಲಿ ನೀರಿನ ತ್ಯಾವಕ್ಕ ಹಸುರಾಗಿದ್ದ ಗರುಕತವು ಆ ಮರಿಗಳ ಮೇಯಾಕ ಬುಟ್ಟನು. ಅವ್ವು ಮೇಯ್ತ ಇದ್ದೊ. ಆ ಬಿಸ್ಲು ಗರುಕ ನೋಡಿ ನೆಂಗ್ನಾಡಿತು. ಗರುಕ ಮೇಯೋ ಮರಿಗಳ ಕಾಯ್ಕಂಡು ರೋಡ್ ಸೈಡಲ್ಲಿ ಈಗ್ತಾನೆ ಹಳ ಎಲನೆಲ್ಲಾವಿ ಕಳದ್ಬುಟ್ಟು ಎಳೆ ಹಸುರು ಸೊಪ್ನ ಹೊಸ ಅಂಗಿ ಹೊಲಿಸ್ಕಂಡು ಸೊಂಪಾಗಿ ಬೆಳ್ದಿದ್ದ ಹೊಂಗ ಮರದ ಬುಡದಲ್ಲಿ ಮನಿಕಂಡ ನಾರಾಯ್ಣಿ. ನಂಜನಗೂಡಿಗೋ ಇಲ್ಲ ಹುಲ್ಲಳ್ಳಿಗೋ ಓಡಾಡೋ ಬಸ್ಸು ಕಾರು, ಕಬ್ಬಿನ ಲಾರಿ, ಟ್ಯಾಗಟ್ರು ಆಗೀಗ ಬೈಕ್ಗಳು ಓಡಾಡ್ತ ನಾರಾಯ್ಣಿ ತರವಾಗಿ ಹಸ ಕುರಿ ಮೇಯಿಸ್ತ ರೋಡ್ ಸೈಡ್ಲಿ ಮನಿಕಂಡವ್ರುಗ ಪೋಂ ಪೋಂ ಜೋಗುಳ ತೂಗ್ತ ಇದ್ವು. ಮತ್ತು ಅಂತ ಹಸ ಕುರಿ ಮೇಯ್ಸೋರ ದಿನಚರಿಯೂ ಅದಾಗಿತ್ತು. ಆದ್ರ...?

ನಾರಾಯ್ಣಿ ಮನಿಕಂಡು ಎಷ್ಟೊತ್ತಾದ್ರೂವಿ ಒಂದೇ ಒಂದು ಬೈಕೂ ಓಡಾಡ್ನಿಲ್ಲ. 'ಇದ್ಯಾಕ?' ಅಂತ ರೋಡ್ನ ಎರಡೂ ದಿಕ್ಕುಕ ಕಣ್ಣ ತೂರ್ಸಿ ಏನೂ ಕಾಣ್ದೆಯ ಬೇಜಾರು ಪಟ್ಕಂಡನು. ತಿರ್ಗಿ ಒಂದ್ಸಲ ಮರಿಗಳ ನೋಡ್ಕಂಡು ನಿದ್ದೆ ಮಾಡ್ಬೇಕು ಅಂತ ಕಣ್ರೆಪ್ಪೆಗಳ ಅಂಟ್ಸಾಕ ಒಂದಾದ್ರ ಬಸ್ಸು ಲಾರಿನೋ ಪೋಂ ಪೋಂ ಮಾಡಿ ಎತ್ತಗಾರ ಓಡಾಡ್ಲಿ ಅಂತ ಬಯಸಿದ್ರೂ ಊಹೂಂ. 'ಎಲ್ಲೋ ರೋಡ್ ಕೆಲ್ಸ ನಡಿತದ, ಬತ್ತವ'